**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 22.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ 1 ನೇ ಅರ್ಜಿದಾರನಾಗಿದ್ದೇನೆ.

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಗೆ ಸಂಬಂದಿಸಿದಂತೆ ಎಫ್ ಐ ಆರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.1 ಎಂದು, ಪಿರ್ಯಾದಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.2 ಎಂದು, ಅಪರಾಧ ವಿವರ ನಮೂನೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.3 ಎಂದು, ಸ್ಥಳ ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.4 ಎಂದು, ಮಹಜರ್ ಸಮಯದಲ್ಲಿ ತೆಗೆಯಲಾದ ಫೋಟೋಗಳ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.5 ಎಂದು, ಐ ಎಂ ವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು, ಪಿ ಎಂ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು, ದಿಃ 21/06/2021 ರಲ್ಲಿ ನೀಡಿರುವ ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು 2 ನೇ ಎದುರುದಾರರ ತಕರಾರಿಗೊಳಪಟ್ಟು ನಿಪಿ.8 ಎಂದು, ಎರಡು ಗಾಯದ ಪ್ರಮಾಣಪತ್ರದ ದೃಢೀಕೃತ

ನಕಲುಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಪಿ.9 ಮತ್ತು 10 ಎಂದು, ದೋಷಾರೋಪಣೆ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದಃ**

ನನ್ನ ತಂದೆ ತಾಯಿಯರಿಗೂ ಹಾಗೂ 1 ನೇ ಎದುರುದಾರರಿಗೂ ಏನು ಸಂಬಂಧ ಎಂದರೆ ಸಾಕ್ಷಿ ಆತ ನಮ್ಮ ತಂದೆಯ ಸ್ನೇಹಿತ ಎಂದು ನುಡಿಯುತ್ತಾರೆ. ನಾನು ನಮ್ಮ ತಂದೆ ತಾಯಿಗೆ ಮೊದಲನೆ ಮಗಳು. ನಾನು ನನ್ನ ಯಜಮಾನರ ಜೊತೆ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಅಪಘಾತವನ್ನು ಖುದ್ದಾಗಿ ನೋಡಿರುವುದಿಲ್ಲ. ನಾನು ನನ್ನ ಪ್ರಮಾಣಪತ್ರದ 2 ನೇ ಪುಟ ಹಾಗೂ 2 ನೇ ಖಂಡಿಕೆಯಲ್ಲಿ ನನ್ನ ತಂದೆ ನಮ್ಮ ಕಾರನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಿಸಿಕೊಂಡು ಬಂದು ಅಪಘಾತಪಡಿಸಿದ್ದರು ಎಂದು ನಾನು ಹೇಳುವುದು ಸುಳ್ಳು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಈಗ ನನ್ನ ತಂದೆ ಜೀವಂತವಿರುತ್ತಾರೆ ಎಂದರೆ ಸರಿ. ನಾನು ನನ್ನ ತಂದೆಯ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಸದರಿ ಅಪಘಾತ ಸಂಭವಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣಕ್ಕೂ ಸದರಿ ಅಪಘಾತದಿಂದ ಗಾಯಗೊಂಡಿದ್ದಕ್ಕೂ ಯಾವುದೇ ರೀತಿಯ ನೇರ ಸಂಬಂಧ ಇರುವುದಿಲ್ಲ ಎಂದರೆ ಅದು ಸರಿಯಲ್ಲ.

ನನ್ನ ತಾಯಿ ಆರೋಗ್ಯವಾಗಿದ್ದು ನಮ್ಮ ಕುಟುಂಬದ ಎಲ್ಲಾ ವ್ಯವಸ್ಥೆಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂಬುದು ಸುಳ್ಳು ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನನ್ನ ತಾಯಿ ಹಾಗೂ ನನ್ನ ಇಬ್ಬರು ಸಹೋದರಿಯರು ಅಪಘಾತದ ಸಮಯದಲ್ಲಿ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದರು ಎಂದು ಹೇಳಿರುತ್ತೇನೆ ಎಂದರೆ ಸರಿ. ನಮ್ಮ ತಾಯಿಯ ಮರಣದಿಂದ

ನಮಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯವರು ನೀಡಿರುವ ಗಾಯದ ಪ್ರಮಾಣಪತ್ರದ ಪ್ರಕಾರ ಎಂವಿಸಿ ನಂ.95/2022 ರ ಅರ್ಜಿದಾರಳು ಕೇವಲ ಸಾದಾ ಸ್ವರೂಪದ ಗಾಯಕ್ಕೆ ಒಳಗಾಗಿರುತ್ತಾಳೆ ಎಂದರೆ ಸಾಕ್ಷಿ ಅದು ಸರಿಯಲ್ಲ ಆಕೆಗೆ ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ ಎನ್ನುತ್ತಾರೆ. ಅಪಘಾತವಾದ ನಂತರ ಆಕೆ ಹಲವಾರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತಾಳೆ ಎಂದು ನಾನು ಹೇಳಿದ್ದು ಹಾಗೂ ಈ ಸಂಬಂಧ ಹಾಜರಪಡಿಸಿರುವ ದಾಖಲೆಗಳು ನಾವು ಸೃಷ್ಟಿ ಮಾಡಿದವು ಎಂದರೆ ಸರಿಯಲ್ಲ. ನಿಪಿ.8 ಎಂದು ಗುರುತಿಸಲಾದ ಅಂಗನ್ಯೂನ್ಯತಾ ಪ್ರಮಾಣಪತ್ರ ಕೂಡ ನಾವು ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ಎಂವಿಸಿ ನಂ.94/2022 ರ ಅರ್ಜಿದಾರಳು ಕೂಡ ಕೇವಲ ಸಾದಾ ಸ್ವರೂಪದ ಗಾಯಕ್ಕೆ ಒಳಗಾಗಿರುತ್ತಾಳೆ ಎಂದರೆ ಸಾಕ್ಷಿ ಅದು ಸರಿಯಲ್ಲ ಆಕೆಗೆ ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ ಎನ್ನುತ್ತಾರೆ. ನಾನು ನನ್ನ ಪ್ರಮಾಣಪತ್ರದ 5 ನೇ ಪುಟದ 7 ನೇ ಖಂಡಿಕೆಯ ಮಧ್ಯ ಭಾಗದಲ್ಲಿ ಹೇಳಿರುವಂತೆ ಎಂವಿಸಿ ನಂ.94/2022 ರ ಅರ್ಜಿದಾರಳು ಶ್ರೇಯಸ್ ಅರ್ಥೋಪೆಡಿಕ್ಸ ಮತ್ತು ಟ್ರಾಮಾ ಸೆಂಟರ್ ಹಾಗೂ ಬೆಂಗಳೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತಾಳೆ ಎಂದು ಆದರೂ ಕೂಡ ಆಕೆ ಗುಣಮುಖಳಾಗಿಲ್ಲ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಆಕೆಯ ಹೆಚ್ಚಿನ ಚಿಕಿತ್ಸೆಗೆ ಒಂದು ಲಕ್ಷ 50 ಸಾವಿರ ರೂ.ಗಳನ್ನು ಖರ್ಚು ಮಾಡಿದ್ದು ಮತ್ತು ಹೆಚ್ಚಿನ ಚಿಕಿತ್ಸೆಗೋಸ್ಕರ ಒಂದು ಲಕ್ಷ ರೂ.ಗಳ ಅವಶ್ಯಕತೆ ಇದೆ ಎಂದು ಹೇಳುವುದು ಕೂಡ ಸುಳ್ಳು ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದ 6 ನೇ ಪುಟದಲ್ಲಿ ಹೇಳಿರುವಂತಹ ಎಲ್ಲಾ ವಿಷಯಗಳು ನಾವು ಸೃಷ್ಟಿ ಮಾಡಿಕೊಂಡ ವಿಷಯಗಳು ಎಂದರೆ ಸರಿಯಲ್ಲ. ನನ್ನ ತಂದೆ ಈಗ ಏನು ಮಾಡುತ್ತಾರೆ ಎಂದರೆ ಸಾಕ್ಷಿ ಅವರಿಗೆ ಈಗ ಯಾವುದೇ ರೀತಿ ಕೆಲಸ ಮಾಡಲು

ಆಗುವುದಿಲ್ಲ, ನನ್ನ ತಂದೆ ಈಗಲೂ ಕೆಲಸ ಮಾಡುತ್ತಾರೆ ಹಾಗೂ ನಮ್ಮನ್ನು ಹಾಗೂ ನನ್ನ ತಂಗಿಯರನ್ನು ಕೂಡ ಅವರು ನೋಡಿಕೊಳ್ಳುತ್ತಾರೆ ಮತ್ತು ಅವರ ಜೊತೆಯಲ್ಲಿಯೇ ನಾವು ಇರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂಗಿಗೆ ಸದರಿ ಅಪಘಾತದಿಂದ ಯಾವುದೇ ರೀತಿ ಅಂಗನ್ಯೂನ್ಯತೆ ಉಂಟಾಗುವಂತಹ ಗಾಯಗಳು ಅಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ವಿಮಾ ಕಂಪನಿ ನೀಡಿರುವ ವಿಮೆ ಸದರಿ ಕಾರಿನಲ್ಲಿ ಚಲಿಸುತ್ತಿದ್ದಂತಹ ಪ್ರಯಾಣಿಕರಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಮೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹೆಚ್ಚಿನ ಪ್ರೀಮಿಯಂ ಕಟ್ಟಿಲ್ಲವಾದ ಕಾರಣ ಕಾರಿನಲ್ಲಿ ಚಲಿಸುತ್ತಿದ್ದವರಿಗೆ ಸದರಿ ವಿಮೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ 2 ನೇ ಎದುರುದಾರರು ಯಾವುದೇ ರೀತಿಯಿಂದಲೂ ನಮಗೆ ಪರಿಹಾರ ಕೊಡಲು ಬಾದಸ್ಥರು ಅಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 3 ನೇ ಎದುರುದಾರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ಲಿಖಿತ ತಕರಾರು ಸಲ್ಲಿಸದಿರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**